ಮಂಡ್ಯ ಜಿಲ್ಲೆಯಲ್ಲಿನ ದೌರ್ಜನ್ಯ ಪ್ರಕರಣಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 166 (301)
ಸದಸ್ಯರ ಹೆಸರು : ಡಾ: ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ)
ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)

ಪ್ರಶ್ನೆಗಳು:–

ಅ) ಮಂಡ್ಯ ಜಿಲ್ಲೆಯಲ್ಲಿ ದಲಿತರ ಕುಟುಂಬಗಳ ಮೇಲೆ ದೌರ್ಜನ್ಯ ಪ್ರಕರಣಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ ನಾಲ್ಕು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಡೆದಿರುವ ದೌರ್ಜನ್ಯ ಪ್ರಕರಣಗಳೆಷ್ಟು? ಸದರಿ ಪ್ರಕರಣಗಳಲ್ಲಿ ಎಷ್ಟು ಮಂದಿಯನ್ನು ಬಂಧಿಸಲಾಗಿದೆ ಮತ್ತು ಅವರುಗಳಿಗೆ ವಿಧಿಸಲಾಗಿರುವ ಶಿಕ್ಷೆಯ ಸ್ವರೂಪವೇನು ಎಂಬುದರ ಬಗ್ಗೆ ತಾಲ್ಲೂಕುವಾರು ಮಾಹಿತಿ ಒದಗಿಸುವುದು?

ಇ) ಮಾನ್ಯ ಗೃಹ ಸಚಿವರೇ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರೂ ಸಹ ಸದರಿ ಜಿಲ್ಲೆಯಲ್ಲಿ ದೌರ್ಜನ್ಯ ಪ್ರಕರಣಗಳು ಅವಿರತವಾಗಿ ನಡೆಯುತ್ತಲೇ ಇದ್ದರೂ ಸಹ ಮಾನ್ಯ ಗೃಹ ಸಚಿವರು ಕಾಳಜಿವಹಿಸದೇ ಇರಲು ಕಾರಣವೇನು?

ಈ) ಮಂಡ್ಯ ಜಿಲ್ಲೆಯಲ್ಲಿ ದೌರ್ಜನ್ಯಕ್ಕೆ ಒಳಗಾದ ದಲಿತ ಕುಟುಂಬಗಳಿಗೆ ಮಾನ್ಯ ಗೃಹ ಸಚಿವರು/ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಯಾವ ರೀತಿಯ ರಕ್ಷಣೆಯನ್ನು ನೀಡಿರುತ್ತಾರೆ ಎಂಬ ಬಗ್ಗೆ ಸಮಗ್ರ ಮಾಹಿತಿ ಒದಗಿಸುವುದು;

ಉ) ಮಾನ್ಯ ಗೃಹ ಸಚಿವರೇ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರೂ ಸಹ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಪೊಲೀಸ್ ಇಲಾಖೆ ನಿಷ್ಕ್ರೀಯಗೊಳ್ಳಲು ಕಾರಣವೇನು?

ಉತ್ತರಗಳು:–

ಅ) ಹೌದು

ಆ) 2008 ರಿಂದ 2012 (25.01.2012) ರವರೆಗೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 261 ದೌರ್ಜನ್ಯ ಪ್ರಕರಣಗಳು ವರದಿಯಾಗಿರುತ್ತದೆ. ಸದರಿ ಪ್ರಕರಣಗಳಲ್ಲಿ 581 ಮಂದಿಯನ್ನು ಬಂಧಿಸಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ–ಅ ದಲ್ಲಿ ನೀಡಲಾಗಿದೆ. ಅವರುಗಳಿಗೆ ವಿಧಿಸಲಾಗಿರುವ ಶಿಕ್ಷೆಯ ಸ್ವರೂಪದ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ–ಆ ದಲ್ಲಿ ನೀಡಲಾಗಿದೆ.

ಇ) ಜಿಲ್ಲೆಯಲ್ಲಿ ದೌರ್ಜನ್ಯ ಪ್ರಕರಣಗಳು ವರದಿಯಾದ ಕೂಡಲೇ ಗಮನಿಸಿ ಜಿಲ್ಲಾ ಆಡಳಿತಕ್ಕೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ನೊಂದವರಿಗೆ ಎಲ್ಲಾ ರೀತಿಯ ರಕ್ಷಣೆಯನ್ನು ಒದಗಿಸಲು ಅಗತ್ಯ ಕ್ರಮಗಳನ್ನು ಕಾಳಜಿವಹಿಸಿ ನಿರ್ವಹಿಸಲಾಗಿದೆ.

ಈ) ಮಂಡ್ಯ ಜಿಲ್ಲೆಯಲ್ಲಿ ವರದಿಯಾಗುವ ದೌರ್ಜನ್ಯ ಪ್ರಕರಣದಲ್ಲಿ ಶೀಘ್ರವಾಗಿ ದೂರುಗಳನ್ನು ದಾಖಲಿಸಿಕೊಂಡು ಶೀಘ್ರದಲ್ಲಿ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಕ್ರಮ ಕೈಗೊಂಡು ನೊಂದವರಿಗೆ ರಕ್ಷಣೆ ನೀಡಲಾಗುತ್ತಿದೆ. ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ದೋಷಾರೋಪಣ ಪತ್ರಗಳನ್ನು ಕಾಲಮಿತಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿ ಪರಿಹಾರ ಧನ ವಿತರಣೆಗಾಗಿ ಶೀಘ್ರದಲ್ಲಿ ಪ್ರಸ್ತಾವನೆಯನ್ನು ಸಮಾಜ ಕಲ್ಯಾಣಾಧಿಕಾರಿಯವರಿಗೆ ಸಲ್ಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರತಿಯೊಂದು ಘಟನೆ ನೆಡದಾಗ ಶೀಘ್ರದಲ್ಲೇ ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶಿಷ್ಟ ಜಾತಿ ಜನಾಂಗ ಹಾಗೂ ಪಂಗಡದವರಿಗೆ ಸೂಕ್ತ ರಕ್ಷಣೆ ನೀಡಿ ಧೈರ್ಯ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಂತಹ ಗ್ರಾಮಗಳಲ್ಲಿ ಭಯದ ವಾತಾವರಣ ಹೋಗುವವರೆಗೂ ಪೊಲೀಸ್ ರಕ್ಷಣಾ ವ್ಯವಸ್ಥೆ ಮಾಡಲಾಗುತ್ತದೆ. ಜಿಲ್ಲೆಯಾದ್ಯಂತ ದಲಿತರ ಮೇಲೆ

ಯಾವುದಾದರೂ ದೌರ್ಜನ್ಯ ನಡೆದರೆ ನಿರ್ಭೀತಿಯಿಂದ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡುವ ವಾತಾವರಣವನ್ನು ಜಿಲ್ಲೆಯಲ್ಲಿ ನಿರ್ಮಿಸಲಾಗಿದೆ ಹಾಗೂ ಈ ವಿಷಯದಲ್ಲಿ ಆಡಳಿತದ ವತಿಯಿಂದ ಯಾವುದೇ ಕರ್ತವ್ಯ ಲೋಪ ಉಂಟಾಗಿರುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಪರಿಶಿಷ್ಟ ಜನಾಂಗದವರ ಕುಂದುಕೊರತೆಗಳ ಬಗ್ಗೆ ಹಾಗೂ ದೌರ್ಜನ್ಯ ನಡೆಯುವುದನ್ನು ತಡೆಯುವ ವಿಚಾರದಲ್ಲಿ ಜಿಲ್ಲಾ ಪೊಲೀಸ್ ಇಲಾಖಾ ವತಿಯಿಂದ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಜಿಲ್ಲಾ ಮಟ್ಟದ ಎಸ್‌ಸಿ/ ಎಸ್‌ಟಿ ಜನಾಂಗದವರ ಮುಖಂಡರುಗಳ ಮಾಸಿಕ ಸಭೆಯನ್ನು ನಡೆಸಿ ಅವರ ಕುಂದುಕೊರತೆಗಳನ್ನು ಆಲಿಸಿ ಅವುಗಳನ್ನು ಬಗೆಹರಿಸುವ ಸಲುವಾಗಿ ಸಂಬಂಧಿಸಿದ ಇತರೆ ಇಲಾಖೆಗಳಿಗೂ ಪತ್ರ ವ್ಯವಹಾರಗಳನ್ನು ಮಾಡಲಾಗಿರುತ್ತದೆ. ಇದೇ ರೀತಿ ಮಂಡ್ಯ ಜಿಲ್ಲಾ ವ್ಯಾಪ್ತಿಯ ಎಲ್ಲಾ ಪೊಲೀಸ್ ಠಾಣಾ ಮಟ್ಟದಲ್ಲೂ ಸಹ ಪ್ರತಿ ತಿಂಗಳು ದಲಿತರಿಗೆ ಒಂದು ದಿನ ಎಂಬ ಕಾರ್ಯಕ್ರಮದ ಅಡಿಯಲ್ಲಿಯೂ ಸಭೆಗಳನ್ನು ನಡೆಸಿ ಅವರ ಕುಂದುಕೊರತೆಗಳ ಬಗ್ಗೆ ಅಗತ್ಯ ಕ್ರಮಗಳನ್ನು ಸಹ ಜರುಗಿಸಲಾಗುತ್ತಿದೆ.

ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಪರಿಶಿಷ್ಟ ಜನಾಂಗದವರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳು ವರದಿಯಾದ ತಕ್ಷಣದಿಂದಲೇ ಪೊಲೀಸ್ ಇಲಾಖಾ ವತಿಯಿಂದ ಸೂಕ್ತ ಪೊಲೀಸ್ ಬಂದೋಬಸ್ತ್‌ನ್ನು ಏರ್ಪಡಿಸಿ ದೌರ್ಜನ್ಯಕ್ಕೊಳಪಟ್ಟವರಿಗೆ ಭದ್ರತೆಯನ್ನು ಒದಗಿಸಲಾಗುತ್ತಿದೆ.

ಊ) ದಲಿತ ಕುಟುಂಬಗಳ ಮೇಲೆ ದೌರ್ಜನ್ಯ ಪ್ರಕರಣ ವರದಿಯಾದ ಕೂಡಲೇ ಸೂಕ್ತ ರಕ್ಷಣೆ ನೀಡಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಚರ್ಚಿಸಿ ಅವರಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಿಲ್ಲೆಯ ಪೊಲೀಸರಿಂದ ಯಾವುದೇ ನಿಷ್ಕ್ರೀಯತೆ ಆಗಿರುವುದಿಲ್ಲ.

ಅನುಬಂಧ – 'ಅ'

ವರ್ಷ	ವರದಿಯಾಗಿದ್ದು			ಬಂಧಿತರ ಸಂಖ್ಯೆ		
2008	ಮಂಡ್ಯ ತಾಲ್ಲೂಕು	–	06	ಮಂಡ್ಯ ತಾಲ್ಲೂಕು	–	ಇಲ್ಲ
	ನಾಗಮಂಗಲ ತಾಲ್ಲೂಕು	–	06	ನಾಗಮಂಗಲ ತಾಲ್ಲೂಕು	–	03
	ಶ್ರೀರಂಗಪಟ್ಟಣ ತಾಲ್ಲೂಕು	–	04	ಶ್ರೀರಂಗಪಟ್ಟಣ ತಾಲ್ಲೂಕು	–	27
	ಪಾಂಡವಪುರ ತಾಲ್ಲೂಕು	–	02	ಪಾಂಡವಪುರ ತಾಲ್ಲೂಕು	–	05
	ಕೆ.ಆರ್.ಪೇಟೆ ತಾಲ್ಲೂಕು	–	01	ಕೆ.ಆರ್.ಪೇಟೆ ತಾಲ್ಲೂಕು	–	07
	ಮಳವಳ್ಳಿ ತಾಲ್ಲೂಕು	–	07	ಮಳವಳ್ಳಿ ತಾಲ್ಲೂಕು	–	09
	ಮದ್ದೂರು ತಾಲ್ಲೂಕು	–	04	ಮದ್ದೂರು ತಾಲ್ಲೂಕು	–	06
2009	ಮಂಡ್ಯ ತಾಲ್ಲೂಕು	–	07	ಮಂಡ್ಯ ತಾಲ್ಲೂಕು	–	09
	ನಾಗಮಂಗಲ ತಾಲ್ಲೂಕು	–	02	ನಾಗಮಂಗಲ ತಾಲ್ಲೂಕು	–	ಇಲ್ಲ
	ಶ್ರೀರಂಗಪಟ್ಟಣ ತಾಲ್ಲೂಕು	–	08	ಶ್ರೀರಂಗಪಟ್ಟಣ ತಾಲ್ಲೂಕು	–	16
	ಪಾಂಡವಪುರ ತಾಲ್ಲೂಕು	–	03	ಪಾಂಡವಪುರ ತಾಲ್ಲೂಕು	–	05
	ಕೆ.ಆರ್.ಪೇಟೆ ತಾಲ್ಲೂಕು	–	02	ಕೆ.ಆರ್.ಪೇಟೆ ತಾಲ್ಲೂಕು	–	10
	ಮಳವಳ್ಳಿ ತಾಲ್ಲೂಕು	–	11	ಮಳವಳ್ಳಿ ತಾಲ್ಲೂಕು	–	14
	ಮದ್ದೂರು ತಾಲ್ಲೂಕು	–	06	ಮದ್ದೂರು ತಾಲ್ಲೂಕು	–	35
2010	ಮಂಡ್ಯ ತಾಲ್ಲೂಕು	–	20	ಮಂಡ್ಯ ತಾಲ್ಲೂಕು	–	07
	ನಾಗಮಂಗಲ ತಾಲ್ಲೂಕು	–	11	ನಾಗಮಂಗಲ ತಾಲ್ಲೂಕು	–	04
	ಶ್ರೀರಂಗಪಟ್ಟಣ ತಾಲ್ಲೂಕು	–	07	ಶ್ರೀರಂಗಪಟ್ಟಣ ತಾಲ್ಲೂಕು	–	19
	ಪಾಂಡವಪುರ ತಾಲ್ಲೂಕು	–	05	ಪಾಂಡವಪುರ ತಾಲ್ಲೂಕು	–	15
	ಕೆ.ಆರ್.ಪೇಟೆ ತಾಲ್ಲೂಕು	–	16	ಕೆ.ಆರ್.ಪೇಟೆ ತಾಲ್ಲೂಕು	–	32
	ಮಳವಳ್ಳಿ ತಾಲ್ಲೂಕು	–	14	ಮಳವಳ್ಳಿ ತಾಲ್ಲೂಕು	–	52
	ಮದ್ದೂರು ತಾಲ್ಲೂಕು	–	14	ಮದ್ದೂರು ತಾಲ್ಲೂಕು	–	58
2011	ಮಂಡ್ಯ ತಾಲ್ಲೂಕು	–	16	ಮಂಡ್ಯ ತಾಲ್ಲೂಕು	–	11
	ನಾಗಮಂಗಲ ತಾಲ್ಲೂಕು	–	06	ನಾಗಮಂಗಲ ತಾಲ್ಲೂಕಿನ ಪ್ರಕರಣದಲ್ಲಿ ಬೇರೆ ತಾಲ್ಲೂಕಿನ ಅಪರಾಧಿಗಳು	–	
				1) ಮದ್ದೂರು	–	01
				2) ಚನ್ನಪಟ್ಟಣ	–	02
				3) ನಾಗಮಂಗಲ	–	18
	ಶ್ರೀರಂಗಪಟ್ಟಣ ತಾಲ್ಲೂಕು	–	20	ಶ್ರೀರಂಗಪಟ್ಟಣ ತಾಲ್ಲೂಕು	–	44
	ಪಾಂಡವಪುರ ತಾಲ್ಲೂಕು	–	14	ಪಾಂಡವಪುರ ತಾಲ್ಲೂಕು	–	34
	ಕೆ.ಆರ್.ಪೇಟೆ ತಾಲ್ಲೂಕು	–	16	ಕೆ.ಆರ್.ಪೇಟೆ ತಾಲ್ಲೂಕು	–	46
	ಮಳವಳ್ಳಿ ತಾಲ್ಲೂಕು	–	13	ಮಳವಳ್ಳಿ ತಾಲ್ಲೂಕು	–	41
	ಮದ್ದೂರು ತಾಲ್ಲೂಕು	–	15	ಮದ್ದೂರು ತಾಲ್ಲೂಕು	–	40
2012 (25.12.12 ರವರೆಗೆ)	ಮಂಡ್ಯ ತಾಲ್ಲೂಕು	–	02	ಮಂಡ್ಯ ತಾಲ್ಲೂಕು	–	01
	ನಾಗಮಂಗಲ ತಾಲ್ಲೂಕು	–	01	ನಾಗಮಂಗಲ ತಾಲ್ಲೂಕು	–	01
	ಶ್ರೀರಂಗಪಟ್ಟಣ ತಾಲ್ಲೂಕು	–	ಇಲ್ಲ	ಶ್ರೀರಂಗಪಟ್ಟಣ ತಾಲ್ಲೂಕು	–	ಇಲ್ಲ
	ಪಾಂಡವಪುರ ತಾಲ್ಲೂಕು	–	ಇಲ್ಲ	ಪಾಂಡವಪುರ ತಾಲ್ಲೂಕು	–	ಇಲ್ಲ
	ಕೆ.ಆರ್.ಪೇಟೆ ತಾಲ್ಲೂಕು	–	ಇಲ್ಲ	ಕೆ.ಆರ್.ಪೇಟೆ ತಾಲ್ಲೂಕು	–	ಇಲ್ಲ
	ಮಳವಳ್ಳಿ ತಾಲ್ಲೂಕು	–	01	ಮಳವಳ್ಳಿ ತಾಲ್ಲೂಕು	–	ಇಲ್ಲ
	ಮದ್ದೂರು ತಾಲ್ಲೂಕು	–	01	ಮದ್ದೂರು ತಾಲ್ಲೂಕು	–	09
	ಒಟ್ಟು	–	261	ಒಟ್ಟು	–	581

ಅನುಬಂಧ – 'ಆ'

ಶಿಕ್ಷೆಯಾದ ಪ್ರಕರಣಗಳ ವಿವರ		
2008	ಮಳವಳ್ಳಿ ತಾಲ್ಲೂಕು ಕಿರುಗಾವಲು ಪೊಲೀಸ್ ಠಾಣೆ ಮೊ.ಸಂ. 54/08 ಕಲಂ 324. ಐಪಿಸಿ. 3 ಕ್ಲಾಸ್ 1. (10) ಎಸ್ಸಿ/ಎಸ್ಟ್ ಕಾಯ್ದೆ.	ದಿನಾಂಕ: 22.1.09 ರಂದು ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಆರೋಪಿಗೆ 6 ತಿಂಗಳು ಸಾದಾ ಸಜೆ ಹಾಗೂ 3000–00 ರೂ. ದಂಡ ವಿಧಿಸಿದೆ. ದಂಡ ಕಟ್ಟಲು ತಪ್ಪಿದಲ್ಲಿ 2 ತಿಂಗಳು ಸಾದಾ ಸಜೆ ವಿಧಿಸಿದೆ. ಹಾಗೂ ಪಿರ್ಯಾದಿಗೆ 4000/– ರೂ. ಪರಿಹಾರ ಕೊಡುವಂತೆ ಆದೇಶ ಹೊರಡಿಸಿರುತ್ತೆ.
	ಮಳವಳ್ಳಿ ತಾಲ್ಲೂಕು ಮಳವಳ್ಳಿ (ಗ್ರಾ) ಮೊ.ಸ. 17/08 ಕಲಂ 302 ಐಪಿಸಿ. ಕೂಡಾ 3. ಕ್ಲಾಸ್ 2 (5) ಎಸ್ಸಿ/ಎಸ್ಟ್ ಕಾಯ್ದೆ.	ದಿನಾಂಕ 05.03.09 ರಂದು ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿ ಇದರ ಜೊತೆಗೆ 15000/– ದಂಡ ವಿಧಿಸುರುತ್ತೆ ಕಟ್ಟಲು ತಪ್ಪಿದಲ್ಲಿ 2 ವರ್ಷ ಜೈಲು ಶಿಕ್ಷೆ ವಿಧಿಸಿರುತ್ತೆ.
	ಮದ್ದೂರು ತಾಲ್ಲೂಕು ಕೆಸ್ತೂರು ಮೊ.ಸಂ. 31/08 ಕಲಂ 341–324 504–506 ರೆ/ವಿ 34. ಐಪಿಸಿ. 3 ಕ್ಲಾಸ್ 1 (10) ಎಸ್ಸಿ/ಎಸ್ಟ್ ಕಾಯ್ದೆ.	ದಿನಾಂಕ 13–2–09 ರಂದು ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಆರೋಪಿ 1 ರವರಿಗೆ 6000/– ರೂ. ದಂಡ ಕಟ್ಟಲು ತಪ್ಪಿದಲ್ಲಿ 6 ತಿಂಗಳು ಸಾದಾ ಸಜೆ ಹಾಗೂ ಆರೋಪಿ 2 ಮತ್ತು 3 ರವರಿಗೆ ತಲಾ 500 ರೂ. ದಂಡ ವಿಧಿಸಿದೆ.
2009	ಮಂಡ್ಯ ತಾಲ್ಲೂಕಿನ ಕೆರಗೋಡು ಠಾಣೆ ಮೊ.ನಂ. 29/2009 ಕಲಂ 324–504 ಐಪಿಸಿ ರೆ/ವಿ 3 ಕ್ಲಾಸ್ (10) ಎಸ್.ಸಿ./ ಎಸ್.ಟಿ ಕಾಯಿದೆ 1989	ಫನ ನ್ಯಾಯಾಲಯವು ಆರೋಪಿಗೆ 6 ತಿಂಗಳ ಸಾದಾ ಸಜೆ, 2000 ರೂ. ದಂಡ ವಿಧಿಸಿದ್ದು, ದಂಡ ಕಟ್ಟಲು ವಿಫಲವಾದರೆ 3 ತಿಂಗಳು ಮತ್ತೆ ಸಾದಾ ಸಜೆ ವಿಧಿಸಿದ್ದು, ಆರೋಪಿ ಅಪೀಲು ಹೋಗುವುದಾಗಿ ತಿಳಿಸಿದ್ದರಿಂದ ಸ್ವತಃ ಜಾಮೀನಿನ ಮೇಲೆ ಬಿಟ್ಟಿದೆ.
	ಮಂಡ್ಯ ತಾಲ್ಲೂಕಿನ ಮಂಡ್ಯ (ಗ್ರಾ) ಠಾಣೆ ಮೊ.ನಂ. 433/2009 ಕಲಂ 448–504–506 ಐಪಿಸಿ ರೆ/ವಿ 3 ಕ್ಲಾಸ್(1) & (10) ಎಸ್.ಸಿ/ ಎಸ್.ಟಿ ಕಾಯಿದೆ 1989	ಆರೋಪಿಯನ್ನು ಎಸ್ಸಿ/ಎಸ್ಟಿ ಯಲ್ಲಿ ಬಿಡುಗಡೆ ಮಾಡಿ ಕಲಂ 448 ಐಪಿಸಿಗೆ 2 ಸಾವಿರ ದಂಡ ಮತ್ತು 506 ಐಪಿಸಿಗೆ 1000 ರೂ. ದಂಡ ವಿಧಿಸಿ ಕಲಂ 135(2) ಸಿಆರ್‌ಪಿಸಿ ಅಡಿಯಲ್ಲಿ ತೀರ್ಮಾನೀಡಿದೆ.
	ನಾಗಮಂಗಲ ತಾಲ್ಲೂಕಿನ ನಾಗಮಂಗಲ (ಗ್ರಾ.) ಠಾಣೆ ಮೊ.ನಂ. 86/2009 ಕಲಂ 376 ಐಪಿಸಿ 3 ಕ್ಲಾಸ್(1) & 10) ಎಸ್.ಸಿ/ ಎಸ್.ಟಿ ಕಾಯಿದೆ 1989	ಕಲಂ 376 ಐಪಿಸಿಯಿಂದ ಬಿಡುಗಡೆ ಮಾಡಿದ್ದು, ಕಲಂ 242 ಪ್ರಕಾರ ಕಲಂ 3 ಕ್ಲಾಸ್ 11 & 12 ಎಸ್‌ಎಸ್‌ಟಿ ಕಾಯ್ದೆಯ ಅಪರಾಧಕ್ಕಾಗಿ 6 ತಿಂಗಳ ಕಾರಾಗೃಹವಾಸ ಹಾಗೂ 3000 ಸಾವರ ಜುಲ್ಮಾನೆಯನ್ನು ವಿಧಿಸಲಾಗಿದೆ.
2010	ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಸಾಗರ ಮೊ.ಸಂ. 155/09 ಕಲಂ: 341/504–323 ಕೂಡ 3 ಕ್ಲಾಸ್ 1–10 ಎಸ್.ಸಿ. ಎಸ್.ಟಿ ಕಾಯಿದೆ	1000 ರೂ. ದಂಡ ಮತ್ತು 2 ತಿಂಗಳ ಸಾದಾ ಸಜೆ.
	ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ, ಮೊ.ಸಂ: 44/2010 ಕಲಂ: 323–504–506–34 ಐ.ಪಿ.ಸಿ ಕೂಡ 3 ಕ್ಲಾಸ್ 1 ಮತ್ತು 10 ಎಸ್.ಸಿ. ಎಸ್.ಟಿ. ಕಾಯಿದೆ	ಆರೋಪಿ 1 ರವರಿಗೆ 6 ತಿಂಗಳು ಸಾದಾ ಸಜೆ ಮತ್ತು 2 ಸಾವಿರ ರೂ. ದಂಡ, ಆರೋಪಿ 2 ಮತ್ತು 3 ರವರಿಗೆ ತಲಾ ಒಂದು ಸಾವಿರ ರೂ. ದಂಡ.